# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 163**

**ಉತ್ತರಿಸಬೇಕಾದ ದಿನಾಂಕ : 14.02.2023**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಶ್ರೀ ಕಣ್ವ ಸೌಹಾರ್ದ ಸಹಕಾರಿ ಮತ್ತು ಸಮೂಹದ ಕಂಪನಿಗಳಲ್ಲಿ ಹೂಡಿಕೆ ಮಾಡಿದ್ದ ಗ್ರಾಹಕರ ರೂ. 1,500/- ಕೋಟಿಗಳ ಹಣವನ್ನು ನಿರ್ದೇಶಕರು ಮತ್ತು ಮಂಡಳಿಯ ಸದಸ್ಯರು ಅವ್ಯವಹಾರದ ಮೂಲಕ ವಂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು; ರಾಜ್ಯಾದ್ಯಂತ ಯಾವ ಯಾವ ಶಾಖೆಗಳ ಮೇಲೆ ಪ್ರಕರಣ ದಾಖಲಾಗಿವೆ; (ಸಂಪೂರ್ಣ ಮಾಹಿತಿ ನೀಡುವುದು) | ಶ್ರೀ ಕಣ್ವ ಸೌಹಾರ್ದ ಸಹಕಾರಿಯಲ್ಲಿ ಹೂಡಿಕೆ ಮಾಡಿದ್ದ ಗ್ರಾಹಕರಿಗೆ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರು ಅವ್ಯವಹಾರದ ಮೂಲಕ ವಂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಸಹಕಾರಿಯ ವಿರುದ್ಧ ಕೈಗೊಂಡಿರುವ ಕ್ರಮದ ವಿವರಗಳನ್ನು **ಅನುಬಂಧ-ಅ** ರಲ್ಲಿ ನೀಡಲಾಗಿದೆ.<br><br>ತನಿಖಾಧಿಕಾರಿಗಳಿಂದ ಸ್ವೀಕೃತವಾದ ಮಾಹಿತಿಯಂತೆ ಸದರಿ ದೋಷಿತ ಹಣಕಾಸು ಸಂಸ್ಥೆಯ ನಿರ್ದೇಶಕರು ಹಾಗೂ ಇತರರು ಸೇರಿದಂತೆ ಒಟ್ಟು 35 ಜನರ ವಿರುದ್ಧ ಕಲಂ 166 (ಎ), 120 (ಬಿ), 420, 468, ಐಪಿಸಿ ಮತ್ತು ಕಲಂ 409 ಐಪಿಸಿ ಜೊತೆ ಕಲಂ 9 ಕೆ.ಪಿ.ಐ.ಡಿ.ಎಫ್.ಇ ಕಾಯ್ದೆ 2004ರಡಿ ಪ್ರಕರಣ ದಾಖಲಿಸಲಾಗಿದೆ.<br><br>ಸದರಿ ದೋಷಿತ ಹಣಕಾಸು ಸಂಸ್ಥೆಗೆ ಸಂಬಂದಿಸಿದಂತೆ ಸಕ್ಷಮ ಪ್ರಾಧಿಕಾರವು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತರಕ್ಷಣಾ ಕಾಯ್ದೆ 2004ರ ಕಲಂ 5(2) ರಡಿ ದಾಖಲಿಸಿದ ಒಟ್ಟು 247 ಪ್ರಕರಣಗಳಲ್ಲಿ ಮಾನ್ಯ ವಿಶೇಷ ನ್ಯಾಯಾಲಯವು ಒಟ್ಟು 140 ಪ್ರಕರಣಗಳಲ್ಲಿ ಜಪ್ತಿ ಆದೇಶವನ್ನು ನಿರುಪಾಧಿಕಗೊಳಿಸಿ ಆದೇಶಿಸಿರುತ್ತದೆ. ಸದರಿ ಸ್ಥಿರಾಸ್ತಿಗಳ ಖಾತೆಯನ್ನು ಸಕ್ಷಮ ಪ್ರಾಧಿಕಾರದ ಹೆಸರಿಗೆ ಕಾಲೋಚಿತಗೊಳಿಸಲು ಮತ್ತು ಸದರಿ ಸ್ವತ್ತುಗಳ ಪ್ರಸ್ತುತ ಮಾರುಕಟ್ಟೆ ಮೌಲ್ಯದ ಬಗ್ಗೆ ಮಾಹಿತಿಯನ್ನು ಸಲ್ಲಿಸುವಂತೆ ಆಯಾ ವ್ಯಾಪ್ತಿಯ ಉಪ ವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರರು ಹಾಗೂ ಬಿಬಿಎಂಪಿ ವ್ಯಾಪ್ತಿಯ ಸಹಾಯಕ ಕಂದಾಯ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ. ಸದರಿ ಕ್ರಮವು ಪ್ರಗತಿಯಲ್ಲಿದೆ. |

| | | |
|---|---|---|
| ಆ) | ಈ ವಂಚನೆಯ ಕುರಿತು ರಾಜ್ಯಾದ್ಯಂತ ದಾಖಲಾದ ಪ್ರಕರಣಗಳು ಎಷ್ಟು: (ಜಿಲ್ಲಾವಾರು ಮಾಹಿತಿಯನ್ನು ನೀಡುವುದು) | ಸಹಕಾರಿಯ ವಿರುದ್ಧ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಒಟ್ಟು 21 ಪ್ರಕರಣಗಳು ದಾಖಲಾಗಿರುತ್ತದೆ.<br>ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-ಆ** ರಲ್ಲಿ ನೀಡಲಾಗಿದೆ. |
| ಇ) | ಪ್ರಕರಣಗಳು ಯಾವ ಹಂತದಲ್ಲಿ ಇವೆ: ಎಷ್ಟು ಪ್ರಕರಣಗಳನ್ನು CID ಅಥವಾ CBIಗೆ ವರ್ಗಾಯಿಸಲಾಗಿದೆ: | ಮಾನ್ಯ ಪಿಡಿಜೆ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರದಲ್ಲಿ ಪ್ರಾಥಮಿಕ ದೋಷಾರೋಪಣಾ ಪಟ್ಟಿಯನ್ನು 21 ಆರೋಪಿಗಳ ವಿರುದ್ಧ ಸಲ್ಲಿಸಿದ್ದು, ಘನ ನ್ಯಾಯಾಲಯವು ಸ್ಪೆಷಲ್ ಸಿ.ಸಿ ಸಂಖ್ಯೆ:191/2021 ಮತ್ತು 192/2021 ನೀಡಿರುತ್ತದೆ.<br>ಮೇಲ್ಕಂಡ ಎರಡು ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಪ್ರಾಥಮಿಕ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಲಾಗಿದೆ.<br>ಎಲ್ಲಾ 21 ಪ್ರಕರಣಗಳನ್ನು ಸಿಐಡಿಗೆ ವರ್ಗಾಯಿಸಲಾಗಿರುತ್ತದೆ. |
| ಈ) | ಈ ಪ್ರಕರಣದಲ್ಲಿ ವಂಚಿತರಾಗಿರುವ ಎಷ್ಟು ಗ್ರಾಹಕರಿಗೆ ಎಷ್ಟು ಮೊತ್ತದ ಹಣವನ್ನು ಹಿಂದಿರುಗಿಸಲಾಗಿದೆ: | ಸದರಿ ದೋಷಿತ ಹಣಕಾಸು ಸಂಸ್ಥೆಗೆ ಸಂಬಂಧಿಸಿದಂತೆ ಮಾನ್ಯ ವಿಶೇಷ ನ್ಯಾಯಾಲಯದಿಂದ ನಿರುಪಾಧಿಕಗೊಳಿಸಿದ ಸ್ವತ್ತುಗಳ ಹರಾಜು ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ. |

**ಸಿಒ 23 ಸಿಎಲ್‌ಎಮ್ 2023 (ಇ)**

**(ಎಸ್. ಟಿ. ಸೋಮಶೇಖರ್)**
**ಸಹಕಾರ ಸಚಿವರು**

## ಅನುಬಂಧ-ಅ

**ಸರ್ಕಾರ/ ಸಹಕಾರ ಇಲಾಖೆ/ ಸಂಯುಕ್ತ ಸಹಕಾರಿಯು ಕೈಗೊಂಡಿರುವ ಕ್ರಮ:**

**ಸರ್ಕಾರ ಕೈಗೊಂಡಿರುವ ಕ್ರಮ:**

- ಠೇವಣಿದಾರರ ದೂರಿನ ಹಿನ್ನೆಲೆಯಲ್ಲಿ ಬಸವೇಶ್ವರ ನಗರ ಪೋಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದ್ದು, ಸಹಕಾರಿಯ ಕೇಂದ್ರ ಕಛೇರಿಯು ಸದರಿ ಪ್ರಕರಣದಲ್ಲಿ ಪೋಲೀಸರಿಂದ ಜಪ್ತಿಯಾಗಿರುತ್ತದೆ. ಆ ನಂತರ ಪ್ರಕರಣ ಸಿಸಿಬಿ ಗೆ ವರ್ಗಾವಣೆಯಾಗಿರುತ್ತದೆ. ಇದೇ ರೀತಿ ವರ್ತೂರು, ಬಾಣಸವಾಡಿ ಸೇರಿದಂತೆ ಅನೇಕ ಪೋಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿರುತ್ತವೆ. ಪ್ರಸ್ತುತ ರಾಜ್ಯ ಸರ್ಕಾರವು ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಿದ್ದು, ಶ್ರೀ ಮೊಹಮ್ಮದ್ ರಫಿ ಇವರು ವಿಚಾರಣಾಧಿಕಾರಿಗಳಾಗಿರುತ್ತಾರೆ.
- ಕರ್ನಾಟಕ ಠೇವಣಿದಾರರ ಹಿತರಕ್ಷಣಾ ಕಾಯ್ದೆ 2004ರಡಿ ಬೆಂಗಳೂರು ನಗರ ಜಿಲ್ಲೆ ಜಿಲ್ಲಾಧಿಕಾರಿಯವರನ್ನು ಸರ್ಕಾರವು ಸಕ್ಷಮ ಪ್ರಾಧಿಕಾರ ಎಂದು ದಿನಾಂಕ 16.05.2020 ರಂದು ನೇಮಕ ಮಾಡಿರುತ್ತದೆ. ನಂತರದಲ್ಲಿ ಆಡಳಿತಾತ್ಮಕ ಕಾರಣಗಳಿಗಾಗಿ ಸಕ್ಷಮ ಪ್ರಾಧಿಕಾರದ ಆದೇಶದಲ್ಲಿ ಬದಲಾವಣೆಗಳಾಗಿದ್ದು ಪ್ರಸ್ತುತ ಅಪರ ಪ್ರಾದೇಶಿಕ ಆಯುಕ್ತರು, ಬೆಂಗಳೂರು ಪ್ರಾಂತ ಇವರು ಸಕ್ಷಮ ಪ್ರಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತೀದ್ದಾರೆ.
- ಸಹಕಾರಿಯ ಕೇಂದ್ರ ಕಛೇರಿಯನ್ನು ಸಕ್ಷಮ ಪ್ರಾಧಿಕಾರವು ಬಸವೇಶ್ವರ ನಗರ ಪೋಲೀಸ್ ಠಾಣೆಯಿಂದ ದಿನಾಂಕ 02.08.2020 ರಂದು ವಶಕ್ಕೆ ಪಡೆದಿರುತ್ತದೆ.
- ಸಹಕಾರಿಯ ಶಾಖೆಗಳಲ್ಲಿಯ ದಾಖಲೆಗಳನ್ನು ಸಿಐಡಿ ವಶಕ್ಕೆ ನೀಡಿ, ಪೀಠೋಪಕರಣ/ಕಛೇರಿ ಉಪಕರಣ ಇತ್ಯಾದಿಗಳನ್ನು ಹರಾಜು ಮಾಡಲಾಗುವುದು ಹಾಗೂ, ಕಛೇರಿಗೆ ನೀಡಿರುವ ಮುಂಗಡವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎಂದು ಸಕ್ಷಮ ಪ್ರಾಧಿಕಾರಿಗಳ ಕಛೇರಿಯಿಂದ ತಿಳಿದು ಬಂದಿರುತ್ತದೆ. ಸಹಕಾರಿಗೆ ಸಂಬಂಧಿಸಿದ ಎಲ್ಲಾ ಬ್ಯಾಂಕ್ ಖಾತೆಗಳನ್ನು ಸರ್ಕಾರ ಫ್ರೀಜ್ ಮಾಡಲು ಆದೇಶಿಸಿರುತ್ತದೆ.
- ಸಹಕಾರಿಯ ಕುರಿತು ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (W.P.8746/2020) ದಾಖಲಾಗಿ ಪ್ರಕರಣ ಜಾರಿಯಲ್ಲಿರುತ್ತದೆ.
- ಸಹಕಾರಿಗೆ ಸಂಬಂಧಿಸಿದ 27 ಬ್ಯಾಂಕ್ ಖಾತೆಗಳನ್ನು ಸರ್ಕಾರ ಫ್ರೀಜ್ ಮಾಡಲು ಆದೇಶಿಸಿರುತ್ತದೆ. ಹಾಗೂ ದಾಖಲೆಗಳು ಲಭ್ಯವಾಗಿರುವ 254 ಸ್ಥಿರಾಸ್ತಿಗಳನ್ನು ಈಗಾಗಲೇ ಜಪ್ತಿ ಮಾಡಲಾಗಿದೆ. ಉಳಿದ ಆಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳ ಪರಿಶೀಲನೆ ಕಾರ್ಯ ಪ್ರಗತಿಯಲ್ಲಿದೆ.
- ಜಪ್ತಿ ಮಾಡಲಾದ 254 ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗಿದ್ದು, ವಿಚಾರಣೆ ಚಾಲ್ತಿಯಲ್ಲಿರುತ್ತದೆ.
- ಪತ್ರಿಕೆ ಪ್ರಕಟಣೆ ಮೂಲಕ ಜಾಹೀರಾತು ನೀಡಿ ಸಂತ್ರಸ್ತರಿಂದ ಕ್ಲೇಮ್‌ಗಳನ್ನು ಪಡೆಯಲಾಗಿದ್ದು ಸಕ್ಷಮ ಪ್ರಾಧಿಕಾರಿಗಳಿಂದ ಕ್ಲೇಮ್‌ಗಳ ದಾಖಲಾತಿಯ ಬಗ್ಗೆ ಪರಿಶೀಲನೆಯ ಹಂತದಲ್ಲಿರುತ್ತದೆ.
- ವಿಶೇಷಾಧಿಕಾರಿಗಳ ಅಧಿಕಾರಾವಧಿ ದಿನಾಂಕ 11.08.2020ಕ್ಕೆ ಮುಕ್ತಾಯವಾಗಿರುತ್ತದೆ. ಅವಧಿ ವಿಸ್ತರಣೆಗೆ ಕಾಯ್ದೆಯಲ್ಲಿ ಅವಕಾಶ ಇಲ್ಲದ ಹಾಗೂ ವಿಶೇಷಾಧಿಕಾರಿಗಳಿಗೆ ಚುನಾವಣೆ ನಡೆಸುವುದನ್ನು ಹೊರತುಪಡಿಸಿ ಸಹಕಾರಿಯ ಆಡಳಿತದಲ್ಲಿ/ವ್ಯವಹಾರದಲ್ಲಿ ಯಾವುದೇ ಅಧಿಕಾರ ಇಲ್ಲ ಎಂದು ಮಾನ್ಯ ಉಚ್ಚ ನ್ಯಾಯಾಲಯವು ಸಾರ್ವಜನಿಕ ಹಿತಾಸಕ್ತಿ ಅರ್ಜಿ (W.P.8746/2020)ರಲ್ಲಿ ಅಭಿಪ್ರಾಯ ಪಟ್ಟಿದ್ದು, ಸಹಕಾರಿಯ ವ್ಯವಹಾರವನ್ನು ನೋಡಿಕೊಳ್ಳಲು ಆಡಳಿತಾಧಿಕಾರಿಗಳ ಸಮಿತಿಯನ್ನು ರಚಿಸಿ ಆದೇಶ ನೀಡಿರುತ್ತದೆ. ಸದರಿ ಸಮಿತಿಯಲ್ಲಿ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಶ್ರೀ ಕೇಶವ ನಾರಾಯಣ ಇವರು ಸಮಿತಿ ಅಧ್ಯಕ್ಷರಾಗಿದ್ದು, ಸಮಿತಿಯಲ್ಲಿ ಇಬ್ಬರು ನಿವೃತ್ತ ಬ್ಯಾಂಕ್ ಅಧಿಕಾರಿಗಳು, ಸಹಕಾರಿಗಳ ಅಪರ ನಿಬಂಧಕರು ಸಮಿತಿ ಸದಸ್ಯರುಗಳಾಗಿರುತ್ತಾರೆ.

- ಸಹಕಾರಿಯ ಸನ್ 2016-17ರಿಂದ 2018-19ರವರೆಗೆ 03 ವರ್ಷಗಳ ಮರುಲೆಕ್ಕಪರಿಶೋಧನೆಗೆ ಆದೇಶ ನೀಡಲಾಗಿತ್ತು. ಆದರೆ ಲೆಕ್ಕಪರಿಶೋಧನೆಗೆ ಅಗತ್ಯ ದಾಖಲಾತಿಗಳು/ಲೆಡ್ಜರ್ ಗಳು ಇಲ್ಲದ ಹಿನ್ನೆಲೆಯಲ್ಲಿ, ಮರುಲೆಕ್ಕಪರಿಶೋಧನೆ ಸಾಧ್ಯವಾಗಿರುವುದಿಲ್ಲ. ಆ ನಂತರ ಮಾನ್ಯ ಉಚ್ಛನ್ಯಾಯಾಲಯದ ಅನುಮತಿ ಪಡೆದು ಫೊರೆನ್ಸಿಕ್ ಅಡಿಟ್‌ಗೆ ಅದೇಶ ನೀಡಲಾಗಿದೆ. ಮೆ:ಬಿ.ಪಿ.ಎಸ್.ಎಸ್.ವೈ & ಕೋ, ಸನ್ನದು ಲೆಕ್ಕಪರಿಶೋಧಕರು ಬೆಂಗಳೂರು ಇವರು ನೇಮಕಗೊಂಡಿದ್ದು ಫೊರೆನ್ಸಿಕ್ ಅಡಿಟ್ ಕಾರ್ಯ ಪ್ರಗತಿಯಲ್ಲಿರುತ್ತದೆ.

  - **ಸಹಕಾರ ಇಲಾಖೆಯಿಂದ ಕೈಗೊಂಡಿರುವ ಕ್ರಮ:**

- ದಿನಾಂಕ 30.11.2020ರಂದು ಮಾನ್ಯ ಸಹಕಾರಿಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರು ಮಾನ್ಯ ಸಹಕಾರಿಗಳ ಉಪ ನಿಬಂದಕರು. 1ನೇ ವಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರನ್ನು ಸಹಕಾರಿಯ ವಿಚಾರಣಾಧಿಕಾರಿಯಾಗಿ ನೇಮಕ ಮಾಡಿರುತ್ತಾರೆ. ಹಾಗೂ ವಿಚಾರಣಾಧಿಕಾರಿಯು ಸಹಕಾರಿಯ ವಿಚಾರಣೆ ನಡೆಸಿ ವಿಚಾರಣಾ ವರದಿಯನ್ನು ಸಂಬಂಧಪಟ್ಟ ನಿಬಂಧಕರಿಗೆ ಸಲ್ಲಿಸಿರುತ್ತಾರೆ.

  - **ಸಂಯುಕ್ತ ಸಹಕಾರಿಯು ಕೈಗೊಂಡಿರುವ ಕ್ರಮ:**

- ಸಂಯುಕ್ತ ಸಹಕಾರಿಗೆ ಸಾಕಷ್ಟು ಪ್ರಮಾಣದಲ್ಲಿ ಠೇವಣಿದಾರರ ಹಣ ಮರುಕಳಿಸದ ಕುರಿತು ದೂರು ಸ್ವೀಕೃತವಾದ ಹಿನ್ನಲೆಯಲ್ಲಿ ಹಾಗೂ ಸಹಕಾರಿಯ ಆಡಳಿತ ಮಂಡಲಿಯ ಎಲ್ಲ ಸದಸ್ಯರಿಗೆ ಪರಿವೀಕ್ಷಣಾ ವರದಿಯಲ್ಲಿನ ನ್ಯೂನತೆಗಳನ್ನು ಸರಿಪಡಿಸಿಕೊಳ್ಳದ ಹಿನ್ನಲೆಯಲ್ಲಿ ಸೌಹಾರ್ದ ಕಾಯ್ದೆ ಕಲಂ 37ಎ ರನ್ವಯ ಅಧಿಬಾರ ಪ್ರಕರಣ ದಾಖಲಿಸುವುದಾಗಿ ನೋಟಿಸ್ ಕಳುಹಿಸಿ ಕ್ರಮವಿಡಲಾಗಿದೆ. ಸಂಯುಕ್ತ ಸಹಕಾರಿಗೆ ಲಭ್ಯವಾಗಿರುವ ಆಸ್ತಿಗಳನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 44ರಡಿ ಸ್ಥಿರಾಸ್ತಿಗಳ ಜಪ್ತಿ ಪೂರ್ವ ಆದೇಶಗಳನ್ನು ಈಗಾಗಲೇ ಸಹಕಾರ ಸಂಘಗಳ ಉಪ ನಿಬಂಧಕರು (ನಿ.441), ದಾವಾ ಪಂಚಾಯ್ತಿ ನ್ಯಾಯಾಲಯದಿಂದ ಜಪ್ತಿ ಆದೇಶ ಪೂರ್ವ ಜಪ್ತಿಗೆ ಒಳಪಡಿಸಿ ಆದೇಶ ಪಡೆಯಲಾಗಿದೆ, ಹಾಗೂ ದಾವಾ ಪಂಚಾಯ್ತಿ ನ್ಯಾಯಾಲಯದಿಂದ ಸಹಕಾರಿಯ ನಿರ್ದೇಶಕರಿಗೆ ಸಂಬಂಧಿಸಿದ 10 ಆಸ್ತಿಯ ಮೇಲೆ ಪೂರ್ವ ಜಪ್ತಿಯ ಆದೇಶವನ್ನು ಸ್ಥಿರಿಕರಣಗೊಳಿಸುವ ಆದೇಶ ಮಾಡಿರುತ್ತಾರೆ.
- ಸಹಕಾರಿಯಲ್ಲಿ ಗಂಭೀರ ಹಣಕಾಸು ಅಕ್ರಮಗಳು ಪರಿವೀಕ್ಷಣಾ ವರದಿಯಲ್ಲಿ ವರದಿಯಾದ ಹಿನ್ನಲೆಯಲ್ಲಿ ಸಹಕಾರಿಯ ಆಡಳಿತ ಮಂಡಲಿಯ ಎಲ್ಲ ಸದಸ್ಯರಿಗೆ ಸೌಹಾರ್ದ ಕಾಯ್ದೆ ಕಲಂ 25(4) ರಡಿ 25(2)(ಎ-2) ರನ್ವಯ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯತ್ವದಿಂದ ಅನರ್ಹತೆಯ ಕುರಿತಂತೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ. ಸದರಿ ಸಹಕಾರಿಯ ನಿರ್ದೇಶಕರ ಸ್ಪಷ್ಟೀಕರಣ ಸಮಂಜಸವಾಗಿರದ ಹಿನ್ನಲೆಯಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ನಿರ್ಣಯದನುಸಾರ ಸದರಿ ಸಹಕಾರಿಯ ಎಲ್ಲಾ ನಿರ್ದೇಶಕರನ್ನು ಸಹಕಾರಿಯ ಆಡಳಿತ ಮಂಡಲಿಯಲ್ಲಿ ಮುಂದುವರೆಯದಂತೆ ಮುಂದಿನ 05 ವರ್ಷದ ವರಗೆ ಯಾವುದೇ ಸಹಕಾರಿಯ ಚುನಾವಣೆಯಲ್ಲಿ ಸ್ಪರ್ಧಿಸದಂತೆ ಅನರ್ಹಗೊಳಿಸಿರುತ್ತದೆ.
- ಸಹಕಾರಿಯ ಪರಿವೀಕ್ಷಣಾ ವರದಿ, ಎಲ್ಲಾ ಬ್ಯಾಂಕ್ ಖಾತೆಗಳ ವಿವರ, ಎಲ್ಲಾ ನಿರ್ದೇಶಕರ ವಿವರ, ಎಲ್ಲಾ ಶಾಖೆಗಳ ವಿವರ, ಕಣ್ವ ಸಮೂಹದ ಎಲ್ಲಾ ಕಂಪನಿಗಳ ವಿವರ, ಕಣ್ವ ಸಮೂಹದ ಹಾಗೂ ಅದರ ನಿರ್ದೇಶಕರುಗಳಿಗೆ ಸಂಬಂಧಿಸಿದ ಆಸ್ತಿಗಳ (ಒಟ್ಟು 172 ಆಸ್ತಿಗಳು) ವಿವರ ಹಾಗೂ ಕಣ್ವ ಸಮೂಹದ ಕಂಪನಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಕಂಪನಿ ರಿಜಿಸ್ಟ್ರಾರ್ ರವರ ಕಛೇರಿಯಿಂದ ಸಂಗ್ರಹಿಸಿ ಹಾಗೂ ಎಲ್ಲಾ ಬ್ಯಾಂಕ್ ವ್ಯವಹಾರಗಳ ದಾಖಲೆಗಳನ್ನು ಲೀಡ್ ಬ್ಯಾಂಕ್ ವ್ಯವಸ್ಥಾಪಕರಿಂದ ಸಂಗ್ರಹಿಸಿ ಸಕ್ಷಮ ಪ್ರಾಧಿಕಾರಿಯವರಿಗೆ ಸಂಯುಕ್ತ ಸಹಕಾರಿಯಿಂದ ಸಲ್ಲಿಸಲಾಗಿರುತ್ತದೆ.

ಜಂಟಿ ನಿಬಂಧಕರು
(ಕಾನೂನು ಕೋಶ)

# ಅನುಬಂಧ-ಆ

## ಕಣ್ವ ಪ್ರಕರಣಗಳ ವಿವರ

| ಕ್ರ.ಸಂ | | ಕಣ್ವ ಸಮೂಹ ಸಂಸ್ಥೆಗಳ ವಿರುದ್ಧ ವಿವಿಧ ಠಾಣೆಗಳಲ್ಲಿ ದಾಖಲಾಗಿರುವ ಪ್ರಕರಣಗಳು | ಪ್ರಕರಣಗಳ ಪ್ರಸ್ತುತ ಹಂತ |
|---|---|---|---|
| 1. | | **ಒಟ್ಟು 21**<br>**ಬೆಂಗಳೂರು ನಗರದಲ್ಲಿ ದಾಖಲಾದ ಪ್ರಕರಣಗಳು** | ಮಾನ್ಯ ಪಿಡಿಜೆ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರದಲ್ಲಿ ಪ್ರಾಥಮಿಕ ದೋಷಾರೋಪನಾ ಪಟ್ಟಿಯನ್ನು 21 ಆರೋಪಿಗಳ ವಿರುದ್ಧ ಸಲ್ಲಿಸಿದ್ದು, ಘನ ನ್ಯಾಯಾಲಯವು ಸ್ಪೆಷಲ್ ಸಿಸಿ ಸಂ.191/2021 ಮತ್ತು 192/2021 ನೀಡಿರುತ್ತದೆ.<br>ಮೇಲ್ಕಂಡ ಎರಡು ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಪ್ರಾಥಮಿಕ ದೋಷರೋಪಣೆ ಪಟ್ಟಿಯನ್ನು ಸಲ್ಲಿಸಿದೆ. |
| | 1. | ಬಸವೇಶ್ವರ ನಗರ ಪೊಲೀಸ್ ಠಾಣೆ, 340/2019 | |
| | 2. | ಬಸವೇಶ್ವರ ನಗರ ಪೊಲೀಸ್ ಠಾಣೆ, 341/2019 | |
| | 3. | ಬಸವೇಶ್ವರ ನಗರ ಪೊಲೀಸ್ ಠಾಣೆ, 342/2019 | |
| | 4. | ಬಸವೇಶ್ವರ ನಗರ ಪೊಲೀಸ್ ಠಾಣೆ, 207/2020 | |
| | 5. | ಬಸವೇಶ್ವರ ನಗರ ಪೊಲೀಸ್ ಠಾಣೆ, 208/2020 | |
| | 6. | ಬಸವೇಶ್ವರ ನಗರ ಪೊಲೀಸ್ ಠಾಣೆ, 209/2020 | |
| | 7. | ಬಸವೇಶ್ವರ ನಗರ ಪೊಲೀಸ್ ಠಾಣೆ, 210/2020 | |
| | 8. | ಬಸವೇಶ್ವರ ನಗರ ಪೊಲೀಸ್ ಠಾಣೆ, 211/2020 | |
| | 9. | ಬಸವೇಶ್ವರ ನಗರ ಪೊಲೀಸ್ ಠಾಣೆ, 212/2020 | |
| | 10. | ಬಸವೇಶ್ವರ ನಗರ ಪೊಲೀಸ್ ಠಾಣೆ, 213/2020 | |
| | 11. | ಬಸವೇಶ್ವರ ನಗರ ಪೊಲೀಸ್ ಠಾಣೆ, 214/2020 | |
| | 12. | ಬಸವೇಶ್ವರ ನಗರ ಪೊಲೀಸ್ ಠಾಣೆ, 215/2020 | |
| | 13. | ಬಸವೇಶ್ವರ ನಗರ ಪೊಲೀಸ್ ಠಾಣೆ, 216/2020 | |
| | 14. | ಬಸವೇಶ್ವರ ನಗರ ಪೊಲೀಸ್ ಠಾಣೆ, 217/2020 | |
| | 15. | ಬಸವೇಶ್ವರ ನಗರ ಪೊಲೀಸ್ ಠಾಣೆ, 270/2021 | |
| | 16. | ಬಸವೇಶ್ವರ ನಗರ ಪೊಲೀಸ್ ಠಾಣೆ, 277/2021 | |
| | 17. | ಕಬ್ಬನ್ ಪಾರ್ಕ್ ಪೊಲೀಸ್ ಠಾಣೆ, ಮೊ.ಸಂ.14/2020 | |
| | 18. | ಬಾಣಸವಾಡಿ ಪೊಲೀಸ್ ಠಾಣೆ, ಮೊ.ಸಂ.19/2020 | |
| | 19. | ಮಾದಕನಾಯಕನಹಳ್ಳಿ ಪೊಲೀಸ್ ಠಾಣೆ ಮೊ.ಸಂ.125/2020 | |
| | | **ಬೆಂಗಳೂರು ಗ್ರಾಮಾಂತರದಲ್ಲಿ ದಾಖಲಾದ ಪ್ರಕರಣಗಳು** | |
| | 1. | ವರ್ತೂರು ಪೊಲೀಸ್ ಠಾಣೆ, ಮೊ.ಸಂ.321/2019 | |
| | 2. | ಹೊಸಕೋಟೆ ಪೊಲೀಸ್ ಠಾಣೆ ಮೊ.ಸಂ.304/2020 | |

ಜಂಟಿ ನಿಬಂಧಕರು
(ಕಾನೂನು ಕೋಶ)